**ಸಾಕ್ಷಿಗೆ ದಿನಾಂಕ 13-07-2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ.ಎಂ.ವಿ.ಎಲ್. ವಕೀಲರಿಂದ**

ನನ್ನ ತಂದೆ ಹುಸೇನ ಸಾಬ ಇವರಿಗೆ ಒಟ್ಟು 8 ಎಕರೆ 36 ಗುಂಟೆ ಜಮೀನು ಇತ್ತು. ಒಟ್ಟು 8 ಎಕರೆ 36 ಗುಂಟೆ ಜಮೀನಿನ ಚೆಕ್ ಬಂದಿ ನನಗೆ ಹೇಳಲು ಬರುತ್ತೇನೆ. ಸದರಿ ಜಮೀನಿನ ಪೂರ್ವಕ್ಕೆ ಮರೆಪ್ಪಾ ತಂದೆ ರಾಯಪ್ಪ ಇತನ ಜಮೀನು, ಪಶ್ಚಿಮಕ್ಕೆ ಮೆಹಬೂಬ ಅಲಿ ಅಬ್ದುಲ ನಬೀ ಇತನ ಜಮೀನು, ಉತ್ತರಕ್ಕೆ ಬಶೀರಖಾನ ಇತನ ಜಮೀನು ಮತ್ತು ದಕ್ಷಿಣಕ್ಕೆ ಅಬ್ದುಲ ಬಾಶಾ ಇತನ ಜಮೀನು ಇರುತ್ತದೆ.

8 ಎಕರೆ 36 ಗುಂಟೆ ಜಮೀನಿನ ಸಾಗುವಳಿಯನ್ನು ಪ್ರತಿವಾದಿಗಳು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಸಾಗುವಳಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಜೀವಿತಾವಧಿಯಲ್ಲಿ 1 ನೇ ಪ್ರತಿವಾದಿಗೆ 3 ಎಕರೆ ಜಮೀನು, 2 ನೇ ಪ್ರತಿವಾದಿಗೆ 3 ಎಕರೆ ಜಮೀನು ಮತ್ತು ನನಗೆ 2 ಎಕರೆ 36 ಗುಂಟೆ ಜಮೀನನ್ನು ಪಾಲು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಅದು ಸಮನಾಗಿ ಪಾಲು ಆಗಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಜಮೀನಿನ ದಕ್ಷಿಣದ ಕಡೆ 2 ನೇ ಪ್ರತಿವಾದಿಯ ಜಮೀನು ಇರುತ್ತದೆ, ಸದರಿ ಜಮೀನು ಇದೇ ಸರ್ವೆ ನಂಬರದ್ದು ಆಗಿರುತ್ತದೆ. 1 ನೇ ಪ್ರತಿವಾದಿಯ ಜಮೀನು 2 ನೇ ಪ್ರತಿವಾದಿಯ ಜಮೀನು ಆದ ನಂತರ ಬರುತ್ತದೆ ಎಂದರೆ ಸರಿ. ನನ್ನ ಪಾಲಿಗೆ ಬಂದ 2 ಎಕರೆ 36 ಗುಂಟೆ ಜಮೀನಿನ ಪೈಕಿ 36 ಗುಂಟೆ ಜಮೀನನ್ನು ನಾನು 2007 ನೇ ಇಸ್ವಿಯಲ್ಲಿ 2 ನೇ ಪ್ರತಿವಾದಿಗೆ ರೂ.40,000/-ಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಪ್ರತಿವಾದಿಯ ಹೆಸರಿಗೆ 3 ಎಕರೆ 36

ಗುಂಟೆ ಜಮೀನು ಮುಟೇಷನ ಆಯಿತು ಎಂದರೆ ಸರಿಯಲ್ಲ. ದಿಃ 11-05-2000 ರಂದು ನನ್ನ ಉಳಿದ ಜಮೀನು 2 ಎಕರೆ ಜಮೀನನ್ನು(ದಾವಾ ಆಸ್ತಿ) 1 ನೇ ಪ್ರತಿವಾದಿಗೆ ರೂ. 26,000/- ಪ್ರತಿ ಎಕರೆಯಂತೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.

8 ಎಕರೆ 36 ಗುಂಟೆ ಜಮೀನಿನ ಪೈಕಿ 2 ನೇ ಪ್ರತಿವಾದಿಯು 3 ಎಕರೆ 36 ಗುಂಟೆ ಜಮೀನಿನ ಕಬ್ಜೆ ಹೊಂದಿದ್ದು, 1 ನೇ ಪ್ರತಿವಾದಿಯು 5 ಎಕರೆ ಜಮೀನಿನ ಕಬ್ಜೆ ಹೊಂದಿರುತ್ತಾನೆ ಎಂದರೆ ಸಾಕ್ಷಿಯು ನಾನು 2 ಎಕರೆ ಜಮೀನಿನ ಕಬ್ಜೆಯನ್ನು ಹೊಂದಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ದಾವಾ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪಾಲಿಗೆ ಬಂದ ಜಮೀನಿನನ್ನು ಮಾರಾಟ ಮಾಡಿ, ಪ್ರತಿವಾದಿಗಳ ವಿರುದ್ದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ**

2 ನೇ ಪ್ರತಿವಾದಿ ಗೈರು ಹಾಜರು ಇದ್ದು ಆತನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ 2 ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.